ಪಿ. ಡಬ್ಲು 1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 10-01-2023.

**ಮುಂದುವರಿದ ಪಾಟೀಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಐ.ಎಮ್.ಎನ್ ವಕೀಲರಿಂದ,**

ವಾದಿ ಗಣಪಯ್ಯ ಕುಪ್ಪಯ್ಯ ದೇವಾಡಿಗ ನನ್ನ ತಂದೆ ಎಂದರೆ ಸರಿ. ಸದರಿ ವಾದಿಗೆ ಸಾಕ್ಷಿ ನುಡಿಯಲು ಏನೂ ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರಿಗೆ ಕಿವಿ ಸರಿಯಾಗಿ ಕೇಳುವುದಿಲ್ಲ ಮತ್ತು ನಡೆದಾಡಲು ಆಗುವುದಿಲ್ಲ ಎನ್ನುತ್ತಾರೆ. ವಾದಿ ನನ್ನ ತಂದೆಗೆ ಆರೋಗ್ಯ ಸರಿ ಇಲ್ಲದ ಬಗ್ಗೆ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ವಾದಿಗೆ ಕಿಡ್ನಿ ಶಸ್ತ್ರ ಚಿಕಿತ್ಸೆಯಾಗಿದೆ. ಅದರ ದಾಖಲೆ ಹಾಜರುಪಡಿಸಿಲ್ಲ. ಅಧಿಕಾರ ಪತ್ರ ನನ್ನ ತಂದೆ ನ್ಯಾಯಾಲಯದ ಆವರಣದಲ್ಲಿ ಬಂದು ತಯಾರಿಸಿ ಸಹಿ ಮಾಡಿಕೊಟ್ಟಿರುತ್ತಾರೆ. ಅಧಿಕಾರ ಪತ್ರ ತಯಾರಿಸುವಾಗ ನನ್ನ ತಂದೆಯೊಂದಿಗೆ ನಾನು, ನಮ್ಮ ವಕೀಲರು ಮತ್ತು ನನ್ನ ಅಣ್ಣ ಉದಯ ದೇವಾಡಿಗ ಇದ್ದರು. ನನ್ನ ಅಣ್ಣ ಉದಯನನ್ನು ಅಧಿಕಾರ ಪತ್ರಕ್ಕೆ ಸಾಕ್ಷಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಅಧಿಕಾರ ಪತ್ರದಲ್ಲಿ ಬರೆದ ಎಲ್ಲಾ ಮಾಹಿತಿ ನನಗೆ ಇರುವುದಿಲ್ಲ. ಸಾಕ್ಷಿ ನುಡಿಯಲು ವಾದಿ ನನಗೆ ಯಾವುದೇ ಅಧಿಕಾರ ಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಜಿಪಿಎ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ತನಗೆ ಬಂದಂತಹ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನಮಗೆ ಮೋಸ ಮಾಡುವ ಉದ್ದೇಶದಿಂದ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ನಮ್ಮ ತಂದೆ ವಾದಿಗೆ ಬಂದ ಆಸ್ತಿ ನಾವೂ ಸಹ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿಯ ಗಂಡನ ನಡುವೆ ತೋಂಡಿ ವಾಂಟಣಿ ಆಗಿರುವ ವಿಚಾರ ಗೊತ್ತಿದ್ದೆಯಾ ಎಂದರೆ ಸಾಕ್ಷಿ ಯಾವುದೇ ವಾಂಟಣಿಯಾಗಿಲ್ಲ ಎಂದು ನುಡಿಯುತ್ತಾರೆ. ದಾವೆ ದಾಖಲಿಸುವಾಗ ಎಲ್ಲಾ ದಾಖಲೆಗಳನ್ನೂ ನೋಡಿರುತ್ತೇವೆ. ದಾವಾ ಆಸ್ತಿಯ ಪಹಣಿ ಪತ್ರಿಕೆ ಮತ್ತು ಮ್ಯುಟೇಶನ್ ಎಂಟ್ರಿ ದಾಖಲೆಗಳನ್ನು ನೋಡಿರುವುದಿಲ್ಲ. ಸನ್ 1974 ರಲ್ಲಿ ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ದಾವಾ ಸ್ವತ್ತುಗಳಲ್ಲಿ ತೋಂಡಿ ವಾಂಟಣಿಯಾಗಿ ಅವರ ಹೆಸರುಗಳು ದಾಖಲೆಯಲ್ಲಿ ಬಂದಂತೆ ಅವರವರು ಕಬ್ಜಾ ವಹಿವಾಟಿನಲ್ಲಿದ್ದರು ಎಂದರೆ ಸರಿಯಲ್ಲ. ತೋಂಡಿ ವಾಂಟಣಿಯಾದ ದಿನದಿಂದ ವಾಂಟಣಿ ಪತ್ರವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿತ್ತು ಎಂದು ನುಡಿಯುತ್ತಾರೆ. ಈ ಹಿಂದೆ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣದ ದಸ್ತಾವೇಜುಗಳನ್ನು ಹಾಜರುಪಡಿಸಿರುತ್ತೇನೆ. ಸನ್

1974 ರಲ್ಲಿ ಆದ ತೋಂಡಿ ವಾಂಟಣಿಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಪ್ರಶ್ನೆ ಮಾಡದೇ ಇದ್ದುದರಿಂದ ತೋಂಡಿ ವಾಂಟಣಿ ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ಮರಣಹೊಂದಿದ ನಂತರ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ನೋಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಬೈಲೂರಿನ ಸಣ್ಣ ಬಲ್ಸೆಯಲ್ಲಿ ವಾಸ ಮಾಡುತ್ತೇನೆ. ನನ್ನ ಗಂಡ 10 ವರ್ಷ ಗೋಕರ್ಣದಲ್ಲಿ, 3 ವರ್ಷ ಮಂಕಿಯಲ್ಲಿ ಮತ್ತು 2 ವರ್ಷಗಳಿಂದ ಮುರ್ಡೇಶ್ವರ ಪೋಲಿಸ್ ಠಾಣೆಯಲ್ಲಿ ಎಎಸ್ಐ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ 1 ನೇ ಪ್ರತಿವಾದಿಯ ಗಂಡ ಕಬ್ಜಾ ವಹಿವಾಟಿನಲ್ಲಿದ್ದಂತೆ ಈಗಲೂ ಸಹ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಕಬ್ಜಾ ವಹಿವಾಟಿನಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಯಾವತ್ತೂ ಜಂಟಿಯಾಗಿ ಕಬ್ಜಾ ವಹಿವಾಟಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತು ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ . ಸಾಕ್ಷಿ ಮುಂದುವರಿದು ವಾದಿ ಮತ್ತು 1 ನೇ ಪ್ರತಿವಾದಿ ಗಂಡ ಕೊಗ್ಗ ಇವರಿಗೆ ಸಮನಾಗಿ ಮಂಜೂರಾಗಿದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ದಾವಾ ಸ್ವತ್ತು ಪ್ರತ್ಯೇಕವಾಗಿ ಮಂಜೂರಾಗಿದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ